ಬ್ಯಾಂಕಿಂಗ್ ವೃತ್ತಿಯಲ್ಲಿರುವ ಟಿ.ಆರ್. ಉಷಾರಾಣಿ ಅವರು ಮೂಲತಃ ಮೈಸೂರಿನವರು. ಪ್ರಸ್ತುತ ಬೆಂಗಳೂರು ನಿವಾಸಿ. ವೃತ್ತಿಯ ದೆಸೆಯಿಂದಾಗಿ ಹಲವು ಊರುಗಳನ್ನು, ಅಲ್ಲಿನ ಆಗುಹೋಗುಗಳನ್ನು ತಿಳಿಯುವ ಅವಕಾಶ ಅವರಿಗೆ ದೊರೆತಿದೆ. 'ದೂರ ತೀರ ಯಾನ', 'ಮಂಜು ಮುಸುಕಿದ ಮನಸು' ಅವರ ಕಥಾಸಂಕಲನಗಳು.

ಕುರ್ಚಿ ಎಳೆಯಲಿಲ್ಲ. ಒಬ್ಬರ ಮುಂದೆ ಮತ್ತೊಬ್ಬರು ಕೂಡಲಿಲ್ಲ. ಗಂಡ ಹೆಂಡತಿ ಅಕ್ಕಪಕ್ಕ ಕುಳಿತರು. ಎದುರಿಗೆ ತರುಣ ಹುಡುಗ. ಬಹುಶಃ ಇವರ ಮಗ ಇರಬಹುದು. ಮಾತು ಮಾತಿಗೂ ಮೇಜು ಕುಟ್ಟುತ್ತಿದ್ದ. ಇದು ಮೊದಲ ಅನುಭವ ಮೇಜಿಗೆ. ತನ್ನ ಪ್ರೀತಿಯ ಗ್ರಾಹಕರು ಬೇಸರದಿಂದಿದ್ದಾರೆ. ಅದಕ್ಕೆ ಕಾರಣ ಈ ಹುಡುಗ. ವಿದೇಶಿ ಟಿಷರ್ಟು, ಜೀನ್ಸ್ ಪ್ಯಾಂಟು ಧರಿಸಿದ್ದಾನೆ. ಒಂದು ಕಿವಿ ಚುಚ್ಚಿಕೊಂಡಿದ್ದಾನೆ. ತಲೆಕೂದಲನ್ನು ನಾರದ ಮುನಿಯಂತೆ ಜುಟ್ಟು ಕಟ್ಟಿಕೊಂಡಿದ್ದಾನೆ. ಫ್ರೆಂಚ್ ಗಡ್ಡ, ಕೈಯ್ಯಲ್ಲಿ ಸಿಗರೇಟು ಹೊತ್ತಿಸಿಕೊಂಡು ಆಶ್ ಟ್ರೇಗಾಗಿ ಹುಡುಕುತ್ತಿದ್ದ. ಮಾತಿನಲ್ಲಿ ಪ್ರೀತಿಯಿಲ್ಲ. ಬಹುಶಃ ಇಬ್ಬರನ್ನೂ ವೃದ್ಧಾಶ್ರಮಕ್ಕೆ ಸೇರಿಸುವ ಹುನ್ನಾರ ಮಾಡುತ್ತಿದ್ದಾನೆ. ಸಾಧ್ಯವಾದರೆ ಅವನ ಕತ್ತು ಹಿಡಿದು ದಬ್ಬುವ ಮನಸ್ಸಾಯಿತು ಮೇಜಿಗೆ. ಏನು ಮಾಡುವುದು ತನಗೆ ಕೈಯಿಲ್ಲ. ಬರೀ ನಾಲ್ಕು ಕಾಲುಗಳು. ಒಂದೆರೆಡು ಸಲ ಗುಟುಕರಿಸಿ ಆ ತಾಯಿ ಕಾಫಿಯನ್ನು ಹಾಗೆಯೇ ಬಿಟ್ಟರು. ಮಗರಾಯ ನೀರನ್ನೂ ಮುಟ್ಟಲಿಲ್ಲ. ಸ್ವಲ್ಪಹೊತ್ತು ಮಾತುಕತೆ ನಡೆಯಿತು. ವೃದ್ಧರೂ ಒಪ್ಪಿದಂತೆ ತಲೆ ಹಾಕಿದರು. ಆತ ಕಾಫೀ ಗುಟುಕರಿಸಿ ಭಾರವಾದ ಮನಸ್ಸಿನಿಂದ ಮೇಲೆದ್ದರು. ಇನ್ನುಮುಂದೆ ಈ ವೃದ್ಧ ಜೋಡಿ ಬರುವುದಿಲ್ಲ. ಇದೇ ಕೊನೆ. ಅಯ್ಯೋ ವಿಧಿಯೇ ಒಬ್ಬ ತಂದೆ- ತಾಯಿ ತಮ್ಮೆಲ್ಲಾ ಮಕ್ಕಳನ್ನು ಪ್ರೀತಿಯಿಂದ ಸಾಕಿ ಬೆಳೆಸುತ್ತಾರೆ. ಒಬ್ಬ ತಂದೆ-ತಾಯಿಯನ್ನು ಮಕ್ಕಳು ನೋಡಿಕೊಳ್ಳುವುದಿಲ್ಲವಲ್ಲ. ಮೇಜು ಕಣ್ಣೀರು ಸುರಿಸಿತು.

ಮತ್ತೊಂದು ಗುಂಪು ಬಂತು. ಈ ಗುಂಪೆಂದರೆ ಮೇಜಿಗೆ ತುಂಬಾ ಇಷ್ಟ. ಅವರಿಗೂ ಇದೇ ಮೇಜು ಬೇಕು. ನಾಲ್ಕು ಜನ ಮಧ್ಯ ವಯಸ್ಕರು. ಎಲ್ಲರದು ಬೇರೆಬೇರೆ ಕೆಲಸ. ಆದರೆ ಮಸ್ತ್ ಮಜಾ ಮಾಡುತ್ತಾರೆ. ಒಂದಾದ ನಂತರ ಒಂದು ತಿಂಡಿ ಆರ್ಡರ್ ಮಾಡುತ್ತಾರೆ. ಈರುಳ್ಳಿ ಪಕೋಡಾದಿಂದ ಶುರುವಾದರೆ, ಮಸಾಲೆ ದೋಸೆ, ಖಾಲಿದೋಸೆ, ಪೂರಿ-ಸಾಗು, ಚೌಚೌ ಬಾತು ಕೊನೆಗೆ ಕಾಫೀ. ಕಾಫೀ ಕುಡಿದ ಮೇಲೆ ಹದಿನೈದು ನಿಮಿಷ ಮಾತು-ನಗು, ಕೇಕೆ. ವಾಹ್ ಗೆಳೆಯರೆಂದರೆ ಇವರೇ. ತಿಂಗಳಿಗೊಮ್ಮೆ ಬರುತ್ತಾರೆ ಬಂದರೆ ಕನಿಷ್ಠಪಕ್ಷ ಎರಡು ಗಂಟೆ. ಬಹುಶಃ ಮುಖವಿದ್ದಿದ್ದರೆ ನಕ್ಕು ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತಿತ್ತೇನೋ ಮೇಜು. ಅದರಲ್ಲಿ ಒಬ್ಬ ಪೋಲಿ ಜೋಕು ಹೇಳುವುದರಲ್ಲಿ ನಿಸ್ಸೀಮ. 'ಥತ್ತ್ ತೇರಿ' ಎಂದು ಮಿಕ್ಕವರು ಉದ್ಗಾರ ಎತ್ತಿದರೂ ಅವನು ಜೋಕು ಹೇಳುವುದು ಇವರಿಗೆ ಕೇಳುವುದು ಎಲ್ಲವೂ ಇಷ್ಟ. ಅವರೆಲ್ಲಾ ಒಂದು ದಿನ ಸ್ಫೋಟಗೊಳಿಸಿದ ವಿಷಯದಿಂದ ಮೇಜಿಗೆ ತಾನು ಕಲ್ಲಾದೆನೇ ಎನಿಸಿತ್ತು. 'ಈವತ್ತೇ ಲಾಸ್ಟ್ ಅಂತೆ. ನಾಳೆಯಿಂದ ಈ ಹೋಟೆಲು ರೆನೋವೇಶನ್ ಅಂತೆ. ಯಜಮಾನ ಇದನ್ನು ಅದ್ಯಾರಿಗೋ ಮಾರಾಟ ಮಾಡಿದ್ದಾರಂತೆ. ಈಗ ಅಳುವ ಸರದಿ ಮೇಜಿನದಾಗಿತ್ತು. ಅಂದರೆ ನನ್ನ ಗತಿ. ಇದುವರೆಗೂ ನನ್ನ ಮೇಜಿನ ಮೇಲೆ ಕೈಯಿಟ್ಟು ನನ್ನನ್ನು ಆದರಿಸುತ್ತಿದ್ದ ಪ್ರೀತಿಯ ಗ್ರಾಹಕರನ್ನು ಮುಂದೆ ನೋಡುವ ಸಾಧ್ಯತೆಯೇ ಇಲ್ಲವೇ? ಮಸಾಲೆಯ ಆ ತುಪ್ಪದ ಘಮ, ಕೇಸರಿಬಾತಿನ ಆ ಪರಿಮಳ ಮತ್ತೆ ತಾನೇ ಕುಡಿಯಬೇಕೆನಿಸುವಷ್ಟು ರುಚಿಯ ಬಿಸಿಬಿಸಿ ಸ್ಟ್ರಾಂಗ್ ಕಾಫಿಯ ಸುವಾಸನೆ ಇನ್ನು

